# ಸಿವಿಲ್ ಮತ್ತು ಜೆ.ಎಮ್.ಎಫ್.ಸಿ. ರವರ ನ್ಯಾಯಾಲಯ, ಯಾದಗಿರಿ

## ಸಿ.ಸಿ ನಂ. 101/2015

| | | |
|---|---|---|
| ಸಾಕ್ಷಿಯ ಹೆಸರು | ಚಂದ್ರು | ಚಾಸಾ- 1 |
| ತಂದೆ ಹೆಸರು | ಪುನ್ಯಾ ನಾಯಕ | ಪ್ರಾಸಾ- 1 |
| ವಯಸ್ಸು | 60 ವರ್ಷ | ದಿ ಃ 14-08-2018 |
| ಉದ್ಯೋಗ | ಒಕ್ಕಲುತನ | |
| ವಾಸಸ್ಥಳ | ಬೋರಬಂಡಾ | **ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು.** |

ಸಾಕ್ಷಿಗೆ ಹಿಂದಿ ಬರುತ್ತಿದ್ದು ಅವರಿಗೆ ಹಿಂದಿಯಲ್ಲಿ ಪ್ರಶ್ನೆಯನ್ನು ಕೇಳಿ ಅವರು ಹೇಳಿದ ಉತ್ತರವನ್ನು ಕನ್ನಡಕ್ಕೆ ಭಾಷಾಂತರಿಸಿ ಸಾಕ್ಷ್ಯವನ್ನು ತೆಗೆದುಕೊಳ್ಳಲಾಯಿತು.

**ಮುಖ್ಯ ವಿಚಾರಣೆ ಃ ಮಾನ್ಯ ಹಿ.ಸ.ಸ.ಅ ರವರಿಂದ ಃ-**

ನನಗೆ ಮೃತ ಸೋಮಲಾ ನಾಯಕ ಪರಿಚಯ ಇರುತ್ತದೆ. ಆತನು ಅಪಘಾತದಲ್ಲಿ ಮರಣ ಹೊಂದಿರುತ್ತಾನೆ. ಅಪಘಾತ ಯಾವ ರೀತಿ ಆಗಿರುತ್ತದೆ ನನಗೆ ಗೊತ್ತಿಲ್ಲ. ಚಾಸಾ 6 ರಿಂದ 35, 38 ರಿಂದ 46 ಹಾಗೂ 50 ರಿಂದ 76 ರವರ ಪರಿಚಯ ಇರುವುದಿಲ್ಲ. ಆರೋಪಿತರ ಪರಿಚಯ ಇರುತ್ತದೆ. ಯಾವ ದಿನಾಂಕದಂದು ಏನಾಗಿರುತ್ತದೆ ಗೊತ್ತಿರುವುದಿಲ್ಲ. ನನಗೆ ಈಗ ಒಂದು ಫಿರ್ಯಾದಿಯನ್ನು ತೋರಿಸಿದ್ದು ಅದನ್ನು ನೋಡುತ್ತಿದ್ದು ಅದರಲ್ಲಿ ಇರುವ ಸಹಿ ನನ್ನದು ಇರುತ್ತದೆ ದಾಖಲೆಯನ್ನು ನಿಪಿ 1 ಎಂದು ಗುರುತಿಸಲಾಯಿತು. ನಿಪಿ 1 ರಲ್ಲಿ ಇರುವ ವಿಷಯ ನನಗೆ ಗೊತ್ತಿರುವುದಿಲ್ಲ. ಪೋಲಿಸರು ನನ್ನನ್ನು ಕರೆಸಿರುವುದಿಲ್ಲ ಯಾವುದೇ ಹೇಳಿಕೆ ಪಡೆದಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಹಿ.ಸ.ಸ.ಅ. ರವರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದರು – ಅನುಮತಿ ನೀಡಲಾಯಿತು)

**ಪಾಟೀಸವಾಲು – ಮಾನ್ಯ ಹಿ.ಸ.ಸ.ಅ. ರವರಿಂದ ಃ-**

ದಿಃ 28.6.2014 ರಂದು ಮದ್ಯಾಹ್ನ 12.15 ಗಂಟೆಗೆ ಚಿನ್ನಾಕರ ಗ್ರಾಮದ ಸಿಮಾಂತರದಲ್ಲಿ ಬರುವ ಸಣ್ಣ ಮುಕಪ್ಪ ಇವರ ಹೊಲದ ಹತ್ತಿರ ತಿರುವು ಮತ್ತು ಇಳಿಜಾರ ರಸ್ತೆಯ ಮೇಲೆ ಆರೋಪಿತನು ತನ್ನ ಐಶರ ಡಿಸಿಎಂ ವಾಹನ ನಂ. ಕೆಎ-19-ಬಿ-2331 ನೇದ್ದರಲ್ಲಿ ನನಗೆ ಹಾಗೂ ಚಾಸಾ 6 ರಿಂದ 35, 38 ರಿಂದ 46 ಹಾಗೂ 50 ರಿಂದ 76 ಮತ್ತು ಮೃತ ಸೋಮಲಾ ನಾಯಕ ಇವರೆಲ್ಲರನ್ನು ಕುಡಿಸಿಕೊಂಡು ಬೆಟ್ಟದಹಳ್ಳಿ ಗ್ರಾಮದ ಬೊರಬಂಡಾ ಗ್ರಾಮಕ್ಕೆ ಬವರುತ್ತಿರುವಾಗ ಆರೋಪಿತನು ತನ್ನ ವಾಹನವನ್ನು ಅತಿವೇಗ ಹಾಗೂ ಅಲಕ್ಷತನದಿಂದ ನಡೆಸಿಕೊಂಡು ವಾಹನವನ್ನು ರಸ್ತೆಯ ಬಲಭಾಗದಲ್ಲಿ ತೆಗೆದುಕೊಂಡು ಹೊಗಿ ಪಲ್ಟಿ ಮಾಡಿದ್ದರಿಂದ ಸದರಿ ವಾಹನದಿಂದ ಈ ಮೇಲ್ಕಂಡ ಸಾಕ್ಷಿದಾರರಿಗೆ ಮತ್ತು ವಾಹನ ಚಾಲಕನಿಗೆ ಸಾದಾ ಮತ್ತು ಭಾರಿ ಸ್ವರೂಪ ರಕ್ತಗಾಯಗಳಾಗಿ ಸದರಿ ಅಪಘಾತದಲ್ಲಿ ಸೋಮಲಾ ನಾಯಕ ಪವಾರ ಇತನಿಗೆ ಭಾರಿ ಗಾಯಗಳಾಗಿ ಚಿಕಿತ್ಸೆ ಫಲಕಾರಿ ಯಾಗದೆ ಸದರಿ ಅಪಘಾತದಲ್ಲಿ ಮೃತ ಪಟ್ಟಿರುತ್ತಾನೆ ಹಾಗೂ ಆರೋಪಿನು ತನ್ನ ವಾಹನದಲ್ಲಿ ಅರ್ಹತೆಕಿಂತ ಹೆಚ್ಚಿನ ಜನರನ್ನು ಕುಡಿಸಿಕೊಂಡು ಸಾಗಿಸಿರುತ್ತಾನೆ ಅಂತಾ ಈಗ ವಿವರವಾಗಿ ಓದಿ ಹೇಳಿದಂತೆ ನಿಪಿ 1 ರಂತೆ ನಾನು ಪೋಲಿಸರ ಮುಂದೆ ಫಿರ್ಯಾದಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ದಿಃ 08.7.2014 ರಂದು ಪೋಲಿಸರ ಮುಂದೆ ಈಗ ವಿವರವಾರಗಿ ಒದಿ ಹೇಳಿದಂತೆ ಸದರಿ ಅಪಘಾತದಲ್ಲಿ ಕ್ರಮ ಸಂಖ್ಯೆ 1 ರಿಂದ 10 ರವರಿಗೆ ಕೂಡ ಇದ್ದರು ಅವರಿಗೂ ಕೂಡ ಅಪಘಾತದಲ್ಲಿ ಸಾದಾ ಮತ್ತು ಭಾರಿ ಸ್ವರೂಪದ ಗಾಯಗಳಾಗಿರುತ್ತವೆ ಹಾಗೂ ರಸ್ತೆಯ ಅಪಘಾತದಲ್ಲಿ ಆದ ಗಾಯಗಳಿಂದ ಸೋಮಲಾ ತಂದೆ ಗುರ್ಯಾ ಪವಾರ ಇತನು ರಾಯಚೂರು ರಿಮ್ಸ್ ಆಸ್ಪತ್ರೆಯಲ್ಲಿ ಉಪಚಾರ ಪಡೆಯುತ್ತಿದ್ದು ಚಿಕಿತ್ಸೆ ಫಲಕಾರಿಯಾಗದೆ

ಮೃತ ಪಟ್ಟಿರುತ್ತಾನೆ ಅಂತಾ ನಾನು ಪೋಲಿಸರ ಮುಂದೆ ಪುರವಣಿ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ 2 ಎಂದು ಗುರುತಿಸಲಾಯಿತು.

ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿತನ ತಪ್ಪಿನಿಂದ ಅಪಘಾತ ಸಂಭವಿಸಿದರೂ ಸಹ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು–ಆರೋಪಿತರ ಪರವಾಗಿ ಶ್ರೀ. ಎಂ.ಎಂ.ಇ. ವಕೀಲರಿಂದ**

ಯಾವುದೇ ಪಾಟೀ ಸವಾಲು ಇಲ್ಲ.

**ಮರುವಿಚಾರಣೆ – ಇಲ್ಲ**

**(ತೇರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸರಿ ಅದೆ**

**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆಎಂಎಫ್‌ಸಿ, ಯಾದಗಿರಿ**